ಒಂದು ಪರಿಚಯ

# ನಾಯಕನನ್ನು ಹಿಂಬಾಲಿಸುವದನ್ನು ಮುಂದುವರಿಸಿ!

## (2 ಥೆಸಲೊನೀಕ)

ನೀವು ಯಾರಿಗಾದರು ಸಹಾಯವನ್ನಾಗಲೀ ಅಥವಾ ಸಲಹೆಯನ್ನಾಗಲೀ ನೀಡಿರುವಿರಾ, ಇದರಲ್ಲಿನ ಸಹಾಯವು ಸಮಸ್ಯೆಯನ್ನು ಜಯಿಸಲು ಸಾಧ್ಯಮಾಡುತ್ತದೆ - ಇದರಿಂದ ಆ ವ್ಯಕ್ತಿಗೆ ಹೆಚ್ಚಿನ ಸಹಾಯ ಅಥವಾ ಅವನಲ್ಲಿ ಬದಲಾವಣೆ ಆಗದೆ ಇರುವದನ್ನು ಕಾಣುತ್ತೇವೆಯೇ? ಈ ವಿಧವಾದಂತ ಅನುಭವವು ಅಧೈರ್ಯವನ್ನು ದುಗುಡವನ್ನು ಉಂಟುಮಾಡುತ್ತದೆ.

ಪೌಲನು ದೇವರ ಪ್ರೇರಿತವಾದ 1 ಥೆಸಲೊನೀಕ ಪತ್ರಿಕೆಯನ್ನು ಬರೆದಾಗ ಥೆಸಲೊನೀಕ ಕ್ರೈಸ್ತರ ಸಮಸ್ಯೆಯನ್ನು ಮತ್ತು ಶೋಧನೆಯನ್ನು ಪರಿಹಾರ ಮಾಡಬಹುದು ಎಂದು ತಿಳಿದನು. ಆದರೆ ಅದು ಆ ರೀತಿಯಾಗಿ ಆಗಲಿಲ್ಲ. ಆದರೆ, ಕೆಲವು ತಿಂಗಳುಗಳ ನಂತರ, ಅದೇ ಸಮಸ್ಯೆಗಳು ಉದ್ಭವಿಸಿದ್ದವು, ಮತ್ತು ಹೊಸ ಸಮಸ್ಯೆಗಳು ಸಹ ಉಂಟಾಗಿದ್ದವು!

ಆಗ ಅವರ ಬೋಧಕರುಗಳು ಏನು ಮಾಡಿದರು? ಅಂತಹ ಪರಿಪಕ್ವತೆ ಹೊಂದದ ಸಹೋದರರ ಕುರಿತು "ಕೈ ಚೆಲ್ಲಿದರೆ" ಥೆಸಲೊನೀಕದವರ ಸಮಸ್ಯೆಯನ್ನು ಇತರರಿಗೆ ಪ್ರಕಟಿಸಿದರೆ? ಆ ಹೊಸ ಸಹೋದರರನ್ನು ದಂಡಿಸಿದರೆ, ಯಾಕೆಂದರೆ ಅವರ ಸಂಖ್ಯೆಯು ತಪ್ಪಾಗಿದ್ದು ಅಥವಾ ಅವರ ಹಿಂಸೆಯ ನಡುವೆ ಚದರಿ ಹೋಗಿದ್ದರೆ? ಅವರು ಚಿಂತೆಮಾಡದಂತೆ ಅಪರಿಪೂರ್ಣತೆಯಲ್ಲಿಯೇ ಮುಂದುವರಿಯಿರಿ ಎಂದು ಅವರಿಗೆ ಹೇಳಿದರೆ?

ಇಲ್ಲ! ಈ ಯಾವುದೇ ಕಾರ್ಯಗಳನ್ನು ಮಾಡಲಿಲ್ಲ. ಸಂಕಷ್ಟದಲ್ಲಿದ್ದಂತ ಸಹೋದರರಿಗೆ ಮಾರ್ಗದರ್ಶನವನ್ನು ವಿವರಣೆಯನ್ನು ಎಚ್ಚರಿಕೆಯನ್ನು ಮತ್ತು ಪ್ರೋತ್ಸಾಹವನ್ನು ನೀಡುವಂತ ಇನ್ನೊಂದು ಪತ್ರವನ್ನು ಬರೆದರು. ಆ ಹೊಸ ಕ್ರೈಸ್ತರು ತಿರುಗಿ ಬೋಧನೆಯನ್ನು ಸ್ವೀಕರಿಸಲು ಸಿದ್ಧರಿರುವರೆಂದು ತಿಳಿದು, ಪೌಲ, ಸೀಲ, ಮತ್ತು ತಿಮೊಥಿ ಅವರಿಗೆ ಇನ್ನೂ ಬೋಧಿಸಿದರು. ಬೋಧನೆಯನ್ನು ಪ್ರೋತ್ಸಾಹವನ್ನು ಮತ್ತು ಇತರರೊಂದಿಗೆ ಸಂಭಾಷಣೆಯನ್ನು ಮುಂದುವರೆಸುವಂತ ಪಾಠವು ಪುಸ್ತಕದಲ್ಲಿರುತ್ತದೆ, ಅವರು ಸಮಸ್ಯೆಯಲ್ಲಿ ಸಿಲುಕಿರುವಾಗಲೂ ಅಥವಾ ಹೊಸ ಸಮಸ್ಯೆಯಲ್ಲಿರುವಾಗಲೂ ಈ ಸಂಗತಿ ಅವರಿಗೆ ಸಹಾಯಿಸುತ್ತದೆ. ಇಂಥ ಕಠಿಣ ಸಮಸ್ಯೆಯಲ್ಲಿರುವವರಿಗೆ ಯಾವ ರೀತಿಯಲ್ಲಿ ಸಹಾಯವಾಗೋಣ?

### ದೇವರ ವಾಕ್ಯವನ್ನು ವಿವರಿಸಿ ಹೇಳಲು ಸಿದ್ಧರಾಗಿರ್ರಿ

ನಾವು ತಿಳಿಸಿದ ಸಂಗತಿಯನ್ನು ನಮ್ಮ ಸುತ್ತಲಿರುವವರು ಕೇಳಿರುವರು, ಅರ್ಥಮಾಡಿಕೊಂಡಿರುವರು, ನಂಬಿರುವರು, ನೆನಪು ಮಾಡುವರು, ಮತ್ತು ನಿತ್ಯವಾಗಿ ಅದರ ಆಚರಣೆ ಮಾಡುವವರು ಎಂದು ಕೆಲವು ಸಾರಿ ನಾವು ಯೋಚಿಸುತ್ತೇವೆ. ಅದು ಆ ರೀತಿ ಯಾಗಿರದು. ಈ ಪ್ರತಿಯೊಂದು ಹೆಜ್ಜೆಗಳಲ್ಲಿ ಎಡವುವರು.

ಯಥಾರ್ಥವಾದ ಹಾಗೂ ನಿರಂತರವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಜನರು ಹಿಂಜರಿಯುವರು. ಅವರು ಸಾಮರ್ಥ್ಯದಲ್ಲಿ, ನಿರ್ಣಯಗಳಲ್ಲಿ, ಜ್ಞಾನದಲ್ಲಿ, ತಿಳುವಳಿಕೆಯಲ್ಲಿ ಸಾಮಾಜಿಕ ಹಾಗೂ ಕೌಟುಂಬಿಕ ಪರಿಸರದಲ್ಲಿ, ಮತ್ತು ಇತರೇ ವಿಷಯಗಳು ಸಹ ವ್ಯತ್ಯಾಸಗೊಂಡು ಬದಲಾವಣೆಗೆ ಅಡಚಣೆ ಉಂಟಾಗಬಹುದು. ಸಲಹೆಗಳನ್ನು ಕೇಳುವ ಹಾಗೂ ಅದನ್ನು ಆಚರಿಸುವ ಸಂಗತಿಗಳ ನಡುವೆ ವಿಧೇಯತೆಯ ಪ್ರಗತಿಯು ಇಲ್ಲದಾಗಬಹುದು.

ಇದರ ಪರಿಣಾಮವಾಗಿ, ಜನರು ತಮಗೆ ಬೋಧಿಸಲ್ಪಟ್ಟಿರುವ ಆಲೋಚನೆಗ

ಳನ್ನು ಅರ್ಥಮಾಡಿಕೊಳ್ಳುವಂತೆ, ಸತ್ಯವೇದದ ನಿಯಮಗಳನ್ನು ಜನರು ಹೊಂದಿಕೊಳ್ಳ ಬೇಕು ಮತ್ತು ಅವುಗಳನ್ನು ತಾಳ್ಮೆಯಿಂದ ಪೂರ್ಣವಾಗಿ ವಿವರಿಸಬೇಕು. ಅವರ ಪ್ರಶ್ನೆಗಳಿಗೆ ಉತ್ತರ ನೀಡಬೇಕು, ಅವರ ಎಲ್ಲಾ ತಪ್ಪಾಭಿಪ್ರಾಯದ ಅಂಶಗಳನ್ನು ಅವರಿಗೆ ವಿವರಿಸಿ ತಿಳಿಸಬೇಕು. ನಾವು ಬಳಸುವ ಪದಗಳಿಂದ, ಅವುಗಳನ್ನು ಹೇಳುವ ವಿಧಾನದಿಂದ, ನಾವು ನೀಡುವ ದೃಷ್ಟಾಂತದಿಂದ ಮತ್ತು ನಮ್ಮ ನಡವಳಿಕೆಯಿಂದ, ಒಬ್ಬ ವ್ಯಕ್ತಿಯು ದೇವರ ಚಿತ್ತವನ್ನು ಅರಿಯುವ ಸಾಮರ್ಥ್ಯಕ್ಕೆ ತೊಡಕು ಉಂಟು ಮಾಡಲು ಸಾಧ್ಯವಿದೆ.

ಇದು ಏಕೆ ಪ್ರಾಮುಖ್ಯವಾಗಿದೆ? ರಕ್ಷಣಾ ಕಾರ್ಯಕ್ಕೆ ಅಡಚಣೆಯಾಗಿರುವದರಿಂದ! ಅದು ಬಹಳ ಪ್ರಾಮುಖ್ಯವಾಗಿದೆ! ಯೌವನಸ್ಥನು ಮತ್ತು ಬೋಧಕನು, ಆದ ತಿಮೊಥೆಯನಿಗೆ, “ನಿನ್ನ ವಿಷಯದಲ್ಲಿಯೂ, ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ ಕಾರ್ಯಗಳಲ್ಲಿ ನಿರತನಾಗಿರು, ಹೀಗಿರುವದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ” (1 ತಿಮೊಥೆ 4:16). ಅವನು ಎಚ್ಚರವುಳ್ಳವನಾಗಿರಬೇಕಿತ್ತು, ನಿರತನಾಗಿದ್ದು, ಜನರ ಆತ್ಮಗಳ ರಕ್ಷಣೆಗಾಗಿ ನಿರ್ದಿಷ್ಟವಾದ ಕಾರ್ಯಮಾಡಬೇಕಿತ್ತು.

ಇತರರಿಗೆ ತಾಳ್ಮೆಯಿಂದ ಸಹಾಯಿಸಬೇಕು. ಅವರಲ್ಲಿರುವ ತಿಳುವಳಿಕೆಯನ್ನು ಮತ್ತು ಮನವರಿಕೆಯನ್ನು ಮೌಲ್ಯಮಾಪನ ಮಾಡಬೇಕು. ಸಂದೇಶವು ಅವರ ಮನಸ್ಸನ್ನು ಹೃದಯಗಳನ್ನು ಮತ್ತು ಜೀವಿತವನ್ನು ಸ್ಪರ್ಶಮಾಡಿದೆ ಎಂಬುದನ್ನು ಅರಿಯುವ ಮೊದಲು, ಅವರ ಜೀವಿತವನ್ನು ಮತ್ತು ಮಾತುಗಳನ್ನು ಸಾಕ್ಷಿಯನ್ನು ಆಧಾರಮಾಡಿಕೊಳ್ಳಬೇಕು.

## ಸಲಹೆಗಳನ್ನು ಪದೇ ಪದೇ ಹೇಳಲು ಇಷ್ಟವುಳ್ಳವರಾಗಿರಿ

ಜನರು ಒಂದು ನಿರ್ದಿಷ್ಟವಾದ ಯೋಜನೆಯನ್ನು ತಿಳುಕೊಂಡಿದ್ದಿರೂ, ಅದನ್ನು ನೆನಪುಮಾಡಿ, ಆಚರಣೆ ಮಾಡದೆ ಇರಬಹುದು. ಒಬ್ಬನು ಒಂದು ಬೋಧನೆಯನ್ನು ಅರಿತು, ತಿಳಿದು, ಅದನ್ನು ಒಪ್ಪಿಕೊಂಡರೂ, ಅವನು ಒಳಗಾಗುವ ಸಂದರ್ಭದಲ್ಲಿ ಅದನ್ನು ಅಳವಡಿಸಿಕೊಳ್ಳದೆ ಇರಬಹುದು. ಆಗ ನಾವು ಹೇಳಿರುವದನ್ನು ಪುನಃ ನೆನಪು ಮಾಡಬೇಕಾಗುತ್ತದೆ. ಅದನ್ನು ಅನೇಕ ಬಾರಿ, ಅಥವಾ ವಾರಗಟ್ಟಲೆ ಮತ್ತು ವರ್ಷಗಟ್ಟಲೆ ತಿಳಿಹೇಳಬೇಕಾಗುತ್ತದೆ, ಆಗ ಬೋಧನೆಯ ಪರಿಣಾಮವು ಉಂಟಾಗುತ್ತದೆ.

ಮೊದಲ ಶತಮಾನದಲ್ಲಿದ್ದ ಕ್ರೈಸ್ತರು ಯೇಸುವಿನ ಉಪದೇಶವನ್ನು ಅಪೊಸ್ತಲರ ಮೂಲಕ, “ಪ್ರಿಯರೇ ನೀವಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲರು ಮೊದಲು ಹೇಳಿದ ಮಾತುಗಳನ್ನು ಜ್ಞಾಪಕ ಮಾಡಿಕೊಳ್ಳಿರಿ” (ಯೂದ 17); “ಪರಿಶುದ್ಧ ಪ್ರವಾದಿಗಳು ಪೂರ್ವದಲ್ಲಿ ಹೇಳಿದ ಮಾತುಗಳನ್ನು ಕರ್ತನಾದ ರಕ್ಷಕನು ಅಪೊಸ್ತಲರ ಮೂಲಕ ಕೊಟ್ಟ ಅಪ್ಪಣೆಯನ್ನು ನೀವು ಜ್ಞಾಪಕಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ” (2 ಪೇತ್ರ 3:2).

ಈಗಾಗಲೇ ಉಪದೇಶಗಳನ್ನು ಹೊಂದಿದ್ದ ಕ್ರೈಸ್ತರುಗಳು ಅದನ್ನು ಪುನಃ ನೆನಪು ಮಾಡಿಕೊಳ್ಳಬೇಕೆಂದು ತಿಳಿಸಲಾಯಿತು: “... ಮೊದಲು ತಿಳಿಸಿದ ಮಾತುಗಳನ್ನು ತಿರಿಗಿ ನಿಮಗೆ ಬರೆಯುವದರಲ್ಲಿ ನನಗೇನು ಬೇಸರವಿಲ್ಲ, ನಿಮ್ಮನ್ನಾದರೋ ಅದು ದೃಢಮಾಡುವದು” (ಫಿಲಿಪ್ಪಿ 3:1); “ನಾನು ನನ್ನ ದೇಹವೆಂಬ ಗುಡಾರದಲ್ಲಿರುವ ತನಕ ನಿಮ್ಮನ್ನು ಜ್ಞಾಪಕಪಡಿಸಿ ಪ್ರೇರಿಸುವದು ಯುಕ್ತವೆಂದೆಣಿಸಿದ್ದೇನೆ” (2 ಪೇತ್ರ 1:13); “ಪ್ರಿಯರೇ, ನಿಮಗೀಗ ಬರೆಯುವುದು ಎರಡನೆಯ ಪತ್ರಿಕೆ, ಜ್ಞಾಪಕಕೊಟ್ಟು ನಿಮ್ಮ ಸರಳ ಮನಸ್ಸನ್ನು ಪ್ರೇರಿಸಿದ್ದೇನೆ” (2 ಪೇತ್ರ 3:1).

ಯೇಸುವಿನ *ಪುನರಾಗಮನದ* ಕುರಿತು ಥೆಸಲೊನೀಕದವರಿಗೆ *ತಿರಿಗಿ* ನೆನಪುಮಾಡಬೇಕಿತ್ತೇ? ಅವರು ಮನಸ್ಸಿನಿಂದ ದೃಢವಾಗಿ ಕೆಲಸಮಾಡಬೇಕಿತ್ತು ಎಂದು *ಪುನಃ* ಪ್ರೋತ್ಸಾಹ ಹೊಂದಬೇಕಿತ್ತೇ? ಹಿಂಸೆಯನ್ನು ಸಹಿಸುವ ಪ್ರೋತ್ಸಾಹವು ಅವರಿಗೆ ಅವಶ್ಯವಿತ್ತೇ?

ಉತ್ತರವು "ಹೌದೆಂಬಂದೆ," ಪ್ರತಿ ವಿಷಯಗಳಿಗಾಗಿ ಈ ಪತ್ರಿಕೆಯ ಜ್ಞಾಪಕದ ಸಲಹೆಗಳನ್ನು ನೀಡುತ್ತದೆ. ದೇವರ ಉಪದೇಶವು ಪುನರಾವರ್ತನೆಗೆ ಯೋಗ್ಯವಾಗಿದೆ!

ಹಿಂದಿನ ಪಾಠವನ್ನು ನೆನಪು ಮಾಡಿರುವೆವು ಎಂದು ಪರಿಗಣಿಸಬಾರದು. ನಂಬಿಕೆಯ ಮೂಲವನ್ನು ಜನರೆಲ್ಲರೂ ಅರ್ಥಮಾಡಿಕೊಂಡಿರುವರು ಎಂದು ತಿಳಿದುಕೊಳ್ಳಬಾರದು. ಅವರು ವಿರೋಧದ ಸಲಹೆಯನ್ನು ಪದೇ ಪದೇ ನೀಡುವಲ್ಲಿ ಕ್ಷಮಾಪಣೆಯನ್ನು ಕೋರಬಾರದು!

## ಉತ್ತೇಜನ ನೀಡಲು ಆಸಕ್ತರಾಗಿರಿ

ಕಷ್ಟದ ಶೋಧನೆಗಳನ್ನು ಪೋಷಿಸುವದರಲ್ಲಿ ದೇವರ ಚಿತ್ತದ ಕಲಿಯುವಿಕೆಯನ್ನು ಮತ್ತು ಆಚರಣೆಯನ್ನು ಪಾಲಿಸಲು ಒತ್ತಾಯದ ಮಾರ್ಗವನ್ನು ಹಿಡಿಯಬೇಡಿರಿ. ಬೋಧಿಸುವಂತ ನಮ್ಮ ಯತ್ನವು "ವ್ಯರ್ಥವಾದದ್ದೆ" ಎಂದು ತಿಳಿಸಲು ಪ್ರಯತ್ನಿಸಬೇಕು. ಕಠೋರ ಹೃದಯಗಳನ್ನು ಸರಿಪಡಿಸಲು ಇರುವ ಉದ್ದೇಶದಲ್ಲಿ, ನಾವೇ ದೀರ್ಘಶಾಂತಿ ಇಲ್ಲದವರು ಎಂಬ ಸೂಚನೆಯನ್ನು ನೀಡುತ್ತೇವೆ.

ಪ್ರತಿ ಸ್ನೇಹಿತ ಹಾಗೂ ವಿದ್ಯಾರ್ಥಿಯಲ್ಲಿರುವ ಸಾಮರ್ಥ್ಯವನ್ನು ವೃದ್ಧಿಪಡಿಸಲು ಪ್ರಯತ್ನಿಸಬೇಕು. ಅದರ ಪರಿಣಾಮವು ವಾರಗಟ್ಟಲೆ, ಅಥವಾ ವರ್ಷಗಟ್ಟಲೆ ತಡವಾಗಬಹುದು. ಎರಡನೇ ಥೆಸಲೊನೀಕ ಹಾಗೂ ಮೊದಲ ಥೆಸಲೊನೀಕ ಪತ್ರಿಕೆಯ, ಬೋಧನೆಗಳಿಗೆ ಈ ಕ್ರೈಸ್ತರು ಹೊಂದಿದ್ದ ಸಮರ್ಥ್ಯವನ್ನು ಪ್ರಕಟಿಸುತ್ತದೆ.

"ನೀವು ಅದನ್ನು ಮಾಡಲು ಸಾಧ್ಯವಿದೆ"; "ನೀವು ಅದನ್ನು ಹಿಂಬಾಲಿಸಲು ಸಾಧ್ಯವಿದೆ"; ಮತ್ತು "ಅದರಲ್ಲಿ ಯಶಸ್ಸನ್ನು ಪಡೆಯುವಿರಿ" ಎಂಬ ಭರವಸವು ನಮಗಿದೆ. 2 ಥೆಸಲೊನೀಕ 3:4 ಈ ಯೋಚನೆಯನ್ನು ತೋರ್ಪಡಿಸುತ್ತದೆ. ನಮ್ಮೊಂದಿಗಿನ ಸಂಬಂಧ ಹಾಗೂ ನಾವು ಯಾರೊಂದಿಗೆ ಇದನ್ನು ಹಂಚಿಕೊಳ್ಳಲು ಯತ್ನಿಸುತ್ತಿರುವೆವೋ, ಅವರು ಇವುಗಳನ್ನು ಹಾಗೂ ದೇವರ ಬಯಕೆಯನ್ನು ಈಡೇರಿಸಲು ಇದು ಉತ್ತೇಜಿಸುತ್ತದೆ. ಆ ವಿಧವಾದ ಉತ್ತೇಜನ ನೀಡುವ ಸಂಭಾಷಣೆಯನ್ನು ನಾವು ವೃದ್ಧಿಪಡಿಸಿ, ಮತ್ತು ನಮ್ಮ ಕ್ರಿಯೆಗಳಿಂದ ದೇವರು ಅವರಿಗೆ ನೀಡಿರುವ ಸಾಮರ್ಥ್ಯವನ್ನು ದೇವರ ಸಹಾಯದಿಂದ ಅರಿತುಕೊಳ್ಳುತ್ತೇವೆ.

## ಮುಕ್ತಾಯ

ಅಪೊಸ್ತಲನಿಂದ ಒಂದು ಪತ್ರವು ನಿಮಗೆ ಬರುವುದಾದರೆ, ಅದರ ಕುರಿತು ಯಾವ ಯೋಚನೆಯು ನಿಮಗೆ ಬರಬಹುದು - ಆ ಅಪೊಸ್ತಲನು ನೀವು ಅರಿತಿರುವ ಕ್ರಿಸ್ತನಲ್ಲಿ ನಿಮ್ಮ ಸಹೋದರನಾಗಿದ್ದರೆ? ನೀವು ಅದನ್ನು ಖಂಡಿತವಾಗಿ ಓದುವಿರಿ, ಒಂದು ವೇಳೆ ಅನೇಕ ಸಾರಿ ಓದಬಹುದು. ಬಹುಶಃ ಅದನ್ನು ವಿಶೇಷವಾದ ಸ್ಥಳದಲ್ಲಿ ಇಡುವಿರಿ. ಅದರಲ್ಲಿರುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿಕೊಳ್ಳಬಹುದು.

ಒಂದು ಪ್ರಕಾರ, ಆ ರೀತಿಯ ಪತ್ರಗಳು ಅನೇಕವಿರಬಹುದು. ಥೆಸಲೊನೀಕದ ಕ್ರೈಸ್ತರಿಗೆ ಎರಡು ವಿಧವಾದ ಪತ್ರಿಕೆಗಳು ಬರೆಯಲ್ಪಟ್ಟಿವೆ. ಅವುಗಳು ನಮಗೂ ಪ್ರಾಮುಖ್ಯವಾಗಿವೆ. ಅವುಗಳ ಮುಖಾಂತರ ನಮಗೂ ಆದಾಯವಿದೆ - ಇದರಿಂದ ಕ್ರಿಸ್ತನನ್ನು ಹಿಂಬಾಲಿಸಿ ಮತ್ತು ಸಕಲ ಸನ್ನಿವೇಶದಲ್ಲೂ ಆತನನ್ನೇ ಅನುಸರಿಸಲು ಸಹಾಯಿಸುತ್ತದೆ. ಬೋಧಕರುಗಳು ಕ್ರೈಸ್ತರಿಗೆ ಇದನ್ನೆ ಆಶಿಸಿದರು. ನಮಗೂ ಅದನ್ನೇ ಆಶಿಸುವರು. ಅವುಗಳನ್ನು ನಿಮ್ಮ ಮನಸ್ಸಿನಲ್ಲೂ ಹಾಗೂ ಹೃದಯದಲ್ಲೂ ಕೂಡಿಟ್ಟುಕೊಳ್ಳಿರಿ. ಅವುಗಳನ್ನು ಜ್ಞಾಪಕಮಾಡಿಕೊಂಡು ಅನುಸರಿಸರಿ. ಅವುಗಳು ನಿಮ್ಮ ಆತ್ಮವನ್ನು ರಕ್ಷಿಸುತ್ತವೆ!